**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ಸತ್ರ ಮೊಕದ್ದಮೆ ಸಂಖ್ಯೆ 71/2022**

ಚಾ.ಸಾಃ 33 ಫ್ರಾ.ಸಾಃ 17

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 05.01.2026

| | | |
|---|---|---|
| ಸಾಕ್ಷಿಯ ಹೆಸರು | : | ಜಾಯಪ್ಪ ನ್ಯಾಮಗೌಡರು |
| ತಂದೆಯ ಹೆಸರು | : | ಶರಣಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಡಿ.ವೈ.ಎಸ್.ಪಿ ಗಂಗಾವತಿ |
| ವಿಳಾಸ | : | ಗಂಗಾವತಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

**(ವಿಸಿ ಮೂಲಕ)**

ನಾನು ವೆಸ್ಟ ರಾಯಚೂರ್ ಪೋಲಿಸ್ ಠಾಣೆಯಲ್ಲಿ ಸಿಪಿಐ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ 26.03.2021 ರಂದು ಚಾಸಾ-32 ರವರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡೆನು.

02. 6 ನೇ ಆರೋಪಿ - ಯಮನಪ್ಪ ಈತನನ್ನು ಪಿ.ಎಸ್.ಐ ಹಾಜರು ಪಡಿಸಿದ್ದು, ಆತನ ಹೇಳಿಕೆ ಪಡೆದು ದಸ್ತಗಿರಿ ಮಾಡಿದೆನು. 6 ನೇ ಆರೋಪಿತನು ತನ್ನ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ವಸ್ತುವನ್ನು ಹಾಜರು ಪಡಿಸುವುದಾಗಿ ಹೇಳಿದನು. ನಂತರ ಗುನ್ನೆ ಸ್ಥಳದಲ್ಲಿ 6 ನೇ ಆರೋಪಿ ತೋರಿಸಿದ ವಸ್ತುಗಳನ್ನು ಪಿ.ಎಸ್.ಐ ರವರು ವಶಪಡಿಸಿಕೊಂಡರು ನನ್ನ ಮುಂದೆ ಹಾಜರು ಪಡಿಸಿದರು.

03. ದಿನಾಂಕ 01.04.2021 ರಂದು ಸ್ಥಳದಲ್ಲಿ ಇದ್ದ ವಸ್ತುಗಳ ಬಗ್ಗೆ ನಿಪಿ.13 ರ ತಜ್ಞರ ವರದಿಯನ್ನು ಪಡೆದೆನು.

04. ದಿನಾಂಕ 09.04.2021 ರಂದು ಗುನ್ನೆ ಸ್ಥಳದಲ್ಲಿ ಚಾಸಾ-8, 9 ರವರ ಸಮಕ್ಷಮ ಚಾಸಾ-31 ರವರು ಸಂಗ್ರಹಿಸಿಕೊಟ್ಟ ಐದು ವಸ್ತುಗಳನ್ನು ನಿಪಿ.23 ರ ಮಹಜರ ಮೂಲಕ ವಶಪಡಿಸಿಕೊಂಡೆನು. ಸಾಕ್ಷಿಯು ಗುರುತಿಸಿದ ಚಾಸಾ-31 ರವರ ವದಿಯನ್ನು **ನಿಪಿ.26** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.26(ಎ)** ಎಂದು ಗುರುತಿಸಲಾಯಿತು. ಸದರಿ ಐದು ವಸ್ತುಗಳನ್ನು ಎ-1 ರಿಂದ ಎ-5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಗುರುತಿಸಿದ ಸಹಿಯನ್ನು **ನಿಪಿ.23(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.23(ಬಿ) ರ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

05. ಸಾಕ್ಷಿಯು ಗುರುತಿಸಿದ ವಸ್ತುಗಳನ್ನು ಈ ಕೆಳಗಿನಂತೆ ಮುದ್ದೆ ಮಾಲುಗಳನ್ನಾಗಿ ಗುರುತಿಸಲಾಯಿತು.

| **ಮುದ್ದೆ ಮಾಲುಗಳು** | **ವಸ್ತುಗಳು** |
|---|---|
| ಮು.ಮಾ.5 | ಬಿಳಿ ಬಣ್ಣದ ಎಲೆಕ್ಟ್ರೀಕ್ ಡಿಟೋನೇಟರ್ ವೈಯರ್ ತುಕಡಿಗಳು (ಎ-1) |
| ಮು.ಮಾ.6 | ಕಲ್ಲು-ಮಣ್ಣು ಮಿಶ್ರಿತ ಪುಡಿ (ಎ-2) |
| ಮು.ಮಾ.7 | ಕಲ್ಲಿನ ತುಕಡಿಗಳು (ಎ-3) |
| ಮು.ಮಾ.8 | 05 ಸ್ವಾಬ್ ಗಳು (ಎ-4) |
| ಮು.ಮಾ.9 | ಸಾದ ಮಣ್ಣು (ಎ-5) |

(ಮು.ಮಾ.5 ರಿಂದ 9 ಇವುಗಳನ್ನು ಸೀಲ್ ಮಾಡಿದ ಡಬ್ಬಗಳಲ್ಲಿ ಇಡಲಾಗಿದ್ದು, ಸದರಿ ಡಬ್ಬಗಳನ್ನು ಮತ್ತು ಅದರಲ್ಲಿ ಕಾಣುವ ವಸ್ತುಗಳನ್ನು

ಸಾಕ್ಷಿಯು ಗುರುತಿಸಿದ್ದು, ಸೀಲ್ ತೆರೆಯದೆಯೇ ವಸ್ತುಗಳನ್ನು ಗುರುತಿಸಲಾಗಿದೆ)

06. ದಿನಾಂಕ 10.04.2021 ರಂದು ಎಇಇ ರವರಿಂದ ಗುನ್ನೆ ಸ್ಥಳದ ನಕ್ಷೆ ಪಡೆದೆನು. ಸಾಕ್ಷಿಯು ಗುರುತಿಸಿದ ನಕ್ಷೆಯನ್ನು **ನಿಪಿ.27** ಎಂದು ಗುರುತಿಸಲಾಯಿತು.

07. ದಿನಾಂಕ 22.04.2021 ರಂದು ವಶಪಡಿಸಿಕೊಂಡ ವಸ್ತುಗಳನ್ನು ಎಫ್.ಎಸ್.ಎಲ್.ಗೆ ಕಳುಹಿಸಿ ಸ್ವೀಕೃತಿ ಪಡೆದೆನು, ಸಾಕ್ಷಿಯು ಗುರುತಿಸಿದ ಸ್ವೀಕೃತಿಯನ್ನು **ನಿಪಿ.28** ಎಂದು ಗುರುತಿಸಲಾಯಿತು.

08. ದಿನಾಂಕ 04.05.2021 ರಂದು 7, 8 ನೇ ಆರೋಪಿತರ ವಿರುದ್ಧ ನ್ಯಾಯಾಲಯದಿಂದ ಬಾಡಿ ವಾರೆಂಟ್ ಪಡೆದೆನು.

09. ನಂತರ ನನಗೆ ವರ್ಗಾವಣೆ ಆಗಿದ್ದರಿಂದ ಚಾಸಾ-34 ರವರಿಗೆ ಮುಂದಿನ ತನಿಖೆಯನ್ನು ವಹಿಸಿಕೊಟ್ಟೆನು.

**1, 6 ನೇ ಆರೋಪಿತರ ಪರ ಶ್ರೀ ಲಕ್ಷ್ಮಣ ವಕೀಲರಿಂದ ಪಾಟೀ ಸವಾಲು:-**

10. ಆರೋಪಿತರನ್ನು ಹೆದರಿಸಿ ನಾನು ಹೇಳಿಕೆ ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ಗುನ್ನೆ ಸ್ಥಳದ ನಕ್ಷೆಯನ್ನು ಪೋಲಿಸ್ ಠಾಣೆಯಲ್ಲಿ ತಯಾರಿಸಲಾಗಿದೆ ಎನ್ನುವುದು ಸರಿಯಲ್ಲ. ಸರಿಯಾಗಿ ತನಿಖೆ ಮಾಡಿಲ್ಲ ಎನ್ನುವುದು ಸರಿಯಲ್ಲ.

**7, 8 ನೇ ಆರೋಪಿತರ ಪರ ಶ್ರೀ ಎಸ್.ಕೆ ವಕೀಲರಿಂದ ಪಾಟೀ ಸವಾಲು:-**

11. ದೂರಿನಲ್ಲಿ 7, 8 ನೇ ಆರೋಪಿತರ ವಿರುದ್ಧ ಯಾವುದೇ ಆಪಾದನೆ ಇಲ್ಲ ಎನ್ನುವುದು ನಿಜ. 7, 8 ನೇ ಆರೋಪಿತರನ್ನು ಹಾಜರು ಪಡಿಸಲು ಸಿಬ್ಬಂದಿ ನೇಮಕ ಮಾಡಿಲ್ಲ ಎನ್ನುವುದು ಸರಿಯಲ್ಲ.

7, 8 ನೇ ಆರೋಪಿತರ ಗ್ರಾಮಕ್ಕೆ ನಾನು ಭೇಟಿಕೊಟ್ಟಿಲ್ಲ ಮತ್ತು ಅಲ್ಲಿ ತನಿಖೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅಲ್ಲಿ ಆರೋಪಿತರು ಸಿಗಲಿಲ್ಲ. 7, 8 ನೇ ಆರೋಪಿತರ ಊರಿಗೆ ನಾನು ಭೇಟಿಕೊಟ್ಟಾಗ ಅಲ್ಲಿ ಯಾರದೇ ಹೇಳಿಕೆ ಪಡೆದಿದ್ದಿರಾ ಎಂದರೆ ನಾನು ಅಲ್ಲಿ ಹೋಗಿದ್ದೇನೆ, ಅಕ್ಕ-ಪಕ್ಕದವರನ್ನು ವಿಚಾರಿಸಿರುತ್ತೇನೆ ಆರೋಪಿ ಇಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಮತ್ತೆ ಹೇಳುತ್ತಾರೆ ಅಲ್ಲಿ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ. 7, 8 ನೇ ಆರೋಪಿತರ ವಿರುದ್ಧ ಯಾವುದೇ ಅಪರಾದ ಕಂಡು ಬಂದಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.